ಶ್ರೀ ಮಲ್ಲಿಕಾರ್ಜುನ ಖರ್ಗೆ (ಜಲ ಸಂಪನ್ಮೂಲ ಮತ್ತು ಸಾರಿಗೆ ಸಚಿವರು) :

ಅ) ಬ್ಯಾರೇಜಿನ ಅಡಿಪಾಯದ ಕೆಲಸ ಸಿಲ್ ಮೇಲ್ಮಟ್ಟದವರೆಗೆ ಆಗಿದೆ, ಎಡದಂಡೆಯಲ್ಲಿ ಅಬಟ್‌ಮೆಂಟ್ ಕೀ ವಾಲ್ ಮತ್ತು, 8 ಪಿಯರ್‌ಗಳ ಕೆಲಸ 2.50 ಮೀಟರ್ ಎತ್ತರದವರೆಗೆ ಪೂರ್ಣಗೊಳಿಸಲಾಗಿದೆ.

ಆ) ಈ ಕಾಮಗಾರಿಯ ಗುತ್ತಿಗೆ ಕರಾರಿನಂತೆ ದಿನಾಂಕ 25–12–2004 ರಂದು ಪೂರ್ಣಗೊಳಿಸಬೇಕಾಗಿತ್ತು .

ಇ) ಈ ಕಾಮಗಾರಿಯು ವಿಳಂಬವಾಗಲು ಕಾರಣಗಳು ಕೆಳಗಿನಂತಿವೆ :

1) ಈ ಕಾಮಗಾರಿಯನ್ನು ದಿನಾಂಕ : 26–12–2002 ರಂದು ಪ್ರಾರಂಭಿಸಿದೆ. ಅಡಿಪಾಯದ ಕೆಲಸ ಪ್ರಗತಿಯಲ್ಲಿರುವಾಗ 2003ರ ಬೇಸಿಗೆ ಕಾಲದಲ್ಲಿ ಕಾಮಗಾರಿಯ ಕೆಳಭಾಗದಲ್ಲಿರುವ ಬೀದರ ಪಟ್ಟಣಕ್ಕೆ ಕುಡಿಯುವ ನೀರನ್ನು ಪೂರೈಸಲು ನದಿ ಮುಖಾಂತರ ಕಾಮಗಾರಿಯ ಮೇಲಭಾಗದಲ್ಲಿರುವ ಕಾರಂಜಾ ಬೃಹತ್ ನೀರಾವರಿ ಯೋಜನೆಯಿಂದ ನೀರು ಬಿಡುಗಡೆ ಮಾಡಲಾಗಿರುವುದರಿಂದ ಕಾಮಗಾರಿ ಪ್ರಗತಿ ಅಡಚಣೆ ಉಂಟಾಯಿತು. ಆದ್ದರಿಂದ ಹೆಚ್ಚುವರಿ ಕಾಲಾವಕಾಶ ಬೇಕಾಯಿತು .

2) ಬ್ಯಾರೇಜಿನ ಎತ್ತರ 3.50 ಮೀಟರದಿಂದ 5.50 ಮೀಟರದವರೆಗೆ ಹೆಚ್ಚಿಸಿದ್ದರಿಂದ ಹಾಗೂ ಕೀ ವಾಲಗಳನ್ನು ಹೆಚ್ಚು ಬೇಕಾಗಿರುವುದರಿಂದ ಹೆಚ್ಚುವರಿ ಕಾಲಾವಕಾಶ ಬೇಕಾಗಿದೆ.

ಈ) ಕಾಮಗಾರಿ ಪ್ರಗತಿಯಲ್ಲಿದೆ. ಗುತ್ತಿಗೆ ಕರಾರಿನಂತೆ ಕಾಮಗಾರಿಯನ್ನು ಪೂರ್ಣಗೊಳಿಸಲು ಕ್ರಮ ತೆಗೆದುಕೊಳ್ಳಲಾಗುವುದು.

313(417) ಶ್ರೀ ಪ್ರಕಾಶ್ ಖಂಡ್ರೆ (ಭಾಲ್ಕಿ) ಮಾನ್ಯ ಜಲ ಸಂಪನ್ಮೂಲ ಮತ್ತು ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಬೀದರ್ ಜಿಲ್ಲೆಯ ಮಾಂಜ್ರಾ ನದಿಗೆ ನಾಲ್ಕು ಬ್ಯಾರೇಜ್‌ಗಳನ್ನು ನಿರ್ಮಾಣ ಮಾಡುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ ;

ಆ) ಇದ್ದರೆ, ಯಾವ ಹಂತದಲ್ಲಿದೆ;

ಇ) ಈ ಕಾಮಗಾರಿಗಳನ್ನು ಯಾವಾಗ ಪ್ರಾರಂಭ ಮಾಡಲಾಗುವುದು ಮತ್ತು ಯಾವಾಗ ಪೂರ್ಣಗೊಳಿಸಲಾಗುವುದು ?

ಶ್ರೀ ಮಲ್ಲಿಕಾರ್ಜುನ ಖರ್ಗೆ(ಜಲ ಸಂಪನ್ಮೂಲ ಮತ್ತು ಸಾರಿಗೆ ಸಚಿವರು) :

ಅ) ಹೌದು.

ಆ) ಮಾಂಜ್ರಾ ನದಿಗೆ ಅಡ್ಡಲಾಗಿ ಮಾಣಿಕೇಶ್ವರ, ಜೀರಗಿಹಾಳ, ಹಾಲಹಳ್ಳಿ, ಹಾಗೂ ಚಂದಾಪುರ ಸ್ಥಳಗಳಲ್ಲಿ ನಾಲ್ಕು ಬ್ಯಾರೇಜುಗಳ ಕಾಮಗಾರಿಗಳು ನೀರಾವರಿ ತನಿಖಾ ವೃತ್ತ ಯರಮರಸ್ ಇವರ ವ್ಯಾಪ್ತಿಯಲ್ಲಿದ್ದುದನ್ನು ಆಗಸ್ಟ್ 2003ರಲ್ಲಿ ಕೃಭಾಜನಿನಿಕ್ಕೆ ಹಸ್ತಾಂತರಿಸಲಾಯಿತು. ಈ ಮುಂಚೆ ನೀರಾವರಿ ತನಿಖಾ ವೃತ್ತ ಯರಮರಸ್ ಇವರು ಸದರಿ ಬ್ಯಾರೇಜುಗಳ ವಿನ್ಯಾಸ, ನಕ್ಷೆ ಮತ್ತು ಅಂದಾಜು ಪಟ್ಟಿಗಳನ್ನು ತಯಾರಿಸಿದ್ದನ್ನು ನಿಗಮದಡಿ ಪರಿಶೀಲಿಸಲಾಗಿ ಅವುಗಳಲ್ಲಿ ಕೆಲವು ತಾಂತ್ರಿಕ ಅವಕಾಶಗಳನ್ನು ಬಿಟ್ಟಿರುವುದು ಗಮನಕ್ಕೆ ಬಂದಿರುವ ಪ್ರಯುಕ್ತ ಪ್ರಸ್ತಾವನೆಗಳ ಬಗ್ಗೆ ತಾಂತ್ರಿಕ ಪರಿಣಿತರ ಸಲಹೆಯನ್ನು ಪಡೆದು ಬ್ಯಾರೇಜುಗಳ ವಿನ್ಯಾಸ, ನಕ್ಷೆ ಹಾಗೂ ಅಂದಾಜುಗಳನ್ನು ಸೂಕ್ತವಾಗಿ

ಮಾರ್ಪಾಡಿಸಲಾಗಿರುತ್ತದೆ. ಸದರಿ ಪ್ರಸ್ತಾವನೆಗಳನ್ನು ಸಧ್ಯದಲ್ಲಿಯೇ ನಿಗಮದ ತಾಂತ್ರಿಕ ಉಪಸಮಿತಿಯ ಅನುಮೋದನೆಗಾಗಿ ಮಂಡಿಸುವ ಹಂತದಲ್ಲಿರುತ್ತವೆ.

ಇ) ಬ್ಯಾರೇಜುಗಳ ಪರಿಷ್ಕರಿಸಿದ ವಿನ್ಯಾಸ, ನಕ್ಷೆ ಮತ್ತು ಅಂದಾಜು ಪಟ್ಟಿಗಳು ನಿಗಮದ ತಾಂತ್ರಿಕ ಉಪಸಮಿತಿಯ ಅನುಮೋದನೆ ಪಡೆದುಕೊಂಡು ನಾಲ್ಕು ತಿಂಗಳ ಅವಧಿಯೊಳಗೆ ಪ್ರಾರಂಭಿಸಲು ಹಾಗೂ ಎರಡು ವರ್ಷ ಕಾಲಾವಧಿಯೊಳಗಾಗಿ ಪೂರ್ಣಗೊಳಿಸಲು ಉದ್ದೇಶಿಸಲಾಗಿದೆ.

315(686) ಶ್ರೀ ರಘುಪತಿ ಭಟ್ ಕೆ. (ಉಡುಪಿ) ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಸಂವಿಧಾನದ 74ನೇ ತಿದ್ದುಪಡಿ ಪ್ರಕಾರ ನಗರಸಭೆಗೆ ಸ್ವಾಯಕ್ತತೆ ನೀಡುವ ಬಗ್ಗೆ ಸರ್ಕಾರ ಉದ್ದೇಶಿಸಿದೆಯೇ ;

ಆ) ನಗರಸಭೆಗಳಿಗೆ ನಿಯಮಾನುಸಾರ ರಾಜ್ಯ ಸರ್ಕಾರದ ಅನುದಾನ ಬಿಡುಗಡೆಯಾಗಿದೆಯೇ;

ಇ) ನಗರಸಭೆಯ ಆಡಳಿತ ಸುಧಾರಣೆಗೆ ಸಂಬಂಧಿಸಿದಂತೆ ಉಡುಪಿ ನಗರಸಭೆಯಲ್ಲಿ ಖಾಲಿ ಇರುವ ಸಿಬ್ಬಂದಿಗಳನ್ನು ಯಾವಾಗ ನೇಮಿಸಿಕೊಳ್ಳಲಾಗುವುದು;

ಈ) ನಗರಸಭೆಗಳಿಗೆ ಅಧ್ಯಕ್ಷ ಉಪಾಧ್ಯಕ್ಷರ ಮೀಸಲಾತಿಯನ್ನು ಯಾವಾಗ ಪ್ರಕಟಿಸಲಾಗುವುದು; ನಗರ ಸಭೆಗಳಲ್ಲಿ ಅಧ್ಯಕ್ಷ ಮೀಸಲಾತಿ ಘೋಷಣೆ ಆಗದೇ ಆಡಳಿತ ಕುಂಠಿತವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಶ್ರೀ ಎನ್.ಧರ್ಮಸಿಂಗ್ (ಮುಖ್ಯಮಂತ್ರಿಗಳು) :

ಅ) ಹೌದು.

ಆ) ರಾಜ್ಯ ಹಣಕಾಸು ಆಯೋಗದ ಅನುದಾನದ ಅಡಿ ನಿಯಮಾನುಸಾರ ಅನುದಾನವನ್ನು ಬಿಡುಗಡೆ ಮಾಡಲಾಗುತ್ತಿದೆ.

ಇ) ನಗರಸಭೆಯಲ್ಲಿ ಖಾಲಿ ಇರುವ ಅಭಿಯಂತರರ ಹುದ್ದೆಗಳನ್ನು ಭರ್ತಿ ಮಾಡಲು ಕರ್ನಾಟಕ ಲೋಕಸೇವಾ ಆಯೋಗಕ್ಕೆ ಪತ್ರ ಬರೆದು ಕ್ರಮ ತೆಗೆದುಕೊಳ್ಳಲಾಗಿದೆ ಹಾಗೂ ಇತರೆ ಖಾಲಿ ಹುದ್ದೆಗಳನ್ನು ಭರ್ತಿ ಮಾಡಲಾಗುತ್ತಿದೆ.

ಈ) ಮೀಸಲಾತಿ ಸಂಬಂಧ ಅಧಿಸೂಚನೆ ಹೊರಡಿಸಿದ್ದು ಸದರಿ ಅಧಿಸೂಚನೆಗೆ ಉಚ್ಚ ನ್ಯಾಯಾಲಯವು ತಡೆ ಆಜ್ಞೆ ನೀಡಿದೆ ಹಾಗೂ ವಿಷಯವು ನ್ಯಾಯಾಲಯದ ಮುಂದೆ ವಿಚಾರಣೆಯಲ್ಲಿದೆ.

316(687) ಶ್ರೀ ರಘುಪತಿ ಭಟ್ ಕೆ. (ಉಡುಪಿ) ಮಾನ್ಯ ಜಲಸಂಪನ್ಮೂಲ ಮತ್ತು ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ರಾಜ್ಯದ ಖಾಸಗಿ ಮಾಲಿಕರುಗಳು ತಮ್ಮ ಸ್ವಂತಕ್ಕೆಂದು ಪರವಾನಿಗೆ ಪಡೆದಿರುವ ಕಾರುಗಳಲಿ ಬಾಡಿಗೆ ಮಾಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?